# ದಿನಾಂಕ:27-11-2010 ರಂದು ನಡೆಯಲಿರುವ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ತೀರ್ಮಾನಕ್ಕಾಗಿ ಮಂಡಿಸಿರುವ ಅಧಿಕ ವಿಷಯಗಳು

## ವಿಷಯದ ಸಂಖ್ಯೆ : 5 (148)/2010-11

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಮಾನ್ಯ ವಿಶೇಷ ಆಯುಕ್ತರು (ಯೋಜನೆ) ರವರು ತಮ್ಮ ಕಛೇರಿಯಲ್ಲಿ ದಿನಾಂಕ : 27-7-2010 ರಂದು ಕಾರ್ಯಪಾಲಕ ಅಭಿಯಂತರರು (ಮೂಲಭೂತ ಸೌಕರ್ಯ) ಮತ್ತು ಉಪ ಆಯುಕ್ತರು (ಭೂ ಸ್ವಾಧೀನ ಮತ್ತು ಟಿ.ಡಿ.ಆರ್), ಸಹಾಯಕ ಕಾರ್ಯಪಾಲಕ ಅಭಿಯಂತರರು (ಮೂಲಭೂತ ಸೌಕರ್ಯ) ರವರುಗಳೊಂದಿಗೆ ಕದಿರೇನಹಳ್ಳಿ ಕೆಳಸೇತುವೆ ನಿರ್ಮಾಣ ಕಾಮಗಾರಿಗೆ ಭೂ ಸ್ವಾಧೀನ ಪಡಿಸಿಕೊಳ್ಳಲು ಉದ್ದೇಶಿಸಿರುವ ಸ್ವತ್ತುಗಳಿಗೆ ನೀಡಬೇಕಾದ ಪರಿಹಾರ ಮೊತ್ತ ಎಷ್ಟು ಎಂಬುದರ ಬಗ್ಗೆ ಈ ಕೆಳಗಿನಂತೆ ಸುದೀರ್ಘವಾಗಿ ಚರ್ಚಿಸಲಾಯಿತು.

ದಿನಾಂಕ:09-12-2009 ರ ಮಾನ್ಯ ಆಡಳಿತಗಾರರು ವಿಷಯ ಸಂಖ್ಯೆ:387/2009-10 ರಲ್ಲಿ ಕದಿರೇನಹಳ್ಳಿ ಕೆಳಸೇತುವೆಯ ನಿರ್ಮಾಣಕ್ಕೆ ಮತ್ತು ಸರ್ವೀಸ್ ರಸ್ತೆ ಅಗಲೀಕರಣಕ್ಕೆ ಭೂ ಸ್ವಾಧೀನ ಕಾಯ್ದೆಯನ್ವಯ ಪ್ರಕ್ರಿಯೆಯು ವಿಳಂಬವಾಗುತ್ತದೆ ಎಂಬ ಕಾರಣಕ್ಕಾಗಿ ಟಿ.ಡಿ.ಆರ್. ಯೋಜನೆಯಡಿಯಲ್ಲಿ ಸ್ವತ್ತುಗಳನ್ನು ವಶಪಡಿಸಿಕೊಳ್ಳಲು, ನಂತರ ಈ ಸ್ವತ್ತುಗಳನ್ನು ಸಂಬಂಧಪಟ್ಟ ಮಾಲೀಕರಿಂದ ನಗದು ಪರಿಹಾರ ನೀಡಿ ಖರೀದಿ ಮಾಡಲು (TDR Buy-Back) ಯೋಜನೆಯನ್ನು ಈ ಒಂದು ಕಾಮಗಾರಿಗೆ ಸೀಮಿತವಾಗಿ ಅನುಮೋದನೆ ನೀಡಲಾಗಿರುತ್ತದೆ. ಇದಕ್ಕಾಗಿ ತಗಲುವ ರೂ.3,45,03,376/- ಗಳ ಭೂಸ್ವಾಧೀನ ಪರಿಹಾರ ವೆಚ್ಚ ಮತ್ತು ಇದಕ್ಕೆ ಸಂಬಂಧಿಸಿದಂತೆ ಡಿ.ಆರ್.ಸಿ.ಗಳನ್ನು ನೋಂದಣಿ ಮಾಡಲು ತಗಲುವ ವೆಚ್ಚವನ್ನು ಸಹ ಕಾಮಗಾರಿಯ ಅಂದಾಜು ವೆಚ್ಚದಿಂದ ಭರಿಸಲು ಸಹ ಅನುಮೋದನೆ ನೀಡಲಾಗಿದೆ. ಭೂಪರಿಹಾರವನ್ನು ಸರ್ಕಾರದ ಕಂದಾಯ ಇಲಾಖೆಯ ಮಾರ್ಗಸೂಚಿ ಬೆಲೆ ಆಧಾರದಲ್ಲಿ ಹಾಗೂ ಕಟ್ಟಡಗಳ ಮೌಲ್ಯವನ್ನು ಸಹ ಇದೇ ಮಾರ್ಗಸೂಚಿಗಳನ್ವಯ ಲೆಕ್ಕ ಹಾಕಲು ನಿರ್ಣಯಿಸಲಾಗಿದೆ.

ಈ ನಿರ್ಣಯದಂತೆ ಸ್ವತ್ತಿನ ಮಾಲೀಕರುಗಳಿಗೆ, ತಿಳುವಳಿಕೆ ಪತ್ರಗಳನ್ನು ನೀಡಿ ಸ್ವತ್ತುಗಳನ್ನು ಟಿ.ಡಿ.ಆರ್. ಯೋಜನೆಯಡಿಯಲ್ಲಿ ಬಿಟ್ಟು ಕೊಡುವಂತೆ ಹಾಗೂ ಈ ಡಿ.ಆರ್.ಸಿ ಯನ್ನು ಪಾಲಿಕೆಗೆ ಅಧ್ಯರ್ಪಣೆ ಮಾಡಿ ಮೇಲ್ಕಂಡಂತೆ ನಿಗಧಿಪಡಿಸಲಾದ ಪರಿಹಾರ ಹಣವನ್ನು ಪಡೆದುಕೊಳ್ಳುವಂತೆ ತಿಳುವಳಿಕೆ ಪತ್ರಗಳನ್ನು ನೀಡಲಾಗಿತ್ತು. ಆದರೆ, ಬಹುತೇಕ ಸ್ವತ್ತುಗಳ ಮಾಲೀಕರು ತಮಗೆ ಸರ್ಕಾರದ ಮಾರ್ಗಸೂಚಿ ದರದಲ್ಲಿ ಮತ್ತು ಹೆಚ್ಚುವರಿ ಶೇ. 30 ರಷ್ಟು ಲೆಕ್ಕ ಹಾಕಿ ನೀಡಿರುವ ಪರಿಹಾರದ ಹಣ ಮಾರುಕಟ್ಟೆ ಬೆಲೆಗಿಂತ ಕಡಿಮೆ ಇರುವ ಕಾರಣ ಸ್ವತ್ತುಗಳನ್ನು ಟಿ.ಡಿ.ಆರ್. ಯೋಜನೆಯಡಿಯಲ್ಲಿ ಬಿಟ್ಟು ಕೊಡಲು ಸಿದ್ದರಿಲ್ಲವೆಂದು ತಕರಾರು ಅರ್ಜಿಗಳನ್ನು, ಆಕ್ಷೇಪಣೆಗಳನ್ನು ನೀಡಿರುತ್ತಾರೆ. ಈ ಬಗ್ಗೆ ಸ್ವತ್ತಿನ ಮಾಲೀಕರನ್ನು ಅನೇಕ ಬಾರಿ ಸಭೆ ಕರೆದು ಮನವೊಲಿಸಲಾಗಿದ್ದರೂ ಸಹ ಪದೇ ಪದೇ ಆಕ್ಷೇಪಣೆಗಳನ್ನು ಮಾಡಿ ಯಾರೂ ಸಹ ಸರ್ಕಾರದ ಮಾರ್ಗಸೂಚಿ ಬೆಲೆ ಮತ್ತು ಶೇ.30 ರಷ್ಟು ಹಣದ ಪರಿಹಾರಕ್ಕೆ ಒಪ್ಪಿಕೊಂಡು ತಮ್ಮ ಸ್ವತ್ತುಗಳನ್ನು ಬಿಟ್ಟುಕೊಡಲು ಒಪ್ಪಿರುವುದಿಲ್ಲ. ಇದರಿಂದಾಗಿ ಈ ಕಾಮಗಾರಿಯ ಪ್ರಗತಿಯು ಕುಂಠಿತವಾಗಿದ್ದು, ಕಂಟ್ರಾಕ್ಟರ್ ರವರಿಗೆ ನಿಗಧಿಪಡಿಸಿರುವ ಸಮಯವನ್ನು ಸಹ ವಿಸ್ತರಣೆ ಮಾಡುವ ಅಗತ್ಯತೆ ಉಂಟಾಗಿರುತ್ತದೆ. ಇದರಿಂದಾಗಿ ಪಾಲಿಕೆಗೆ ಹೆಚ್ಚುವರಿ ಹಣವನ್ನು ಕಂಟ್ರಾಕ್ಟರ್‌ಗೆ ಕೊಡುವಂತಹ ಪರಿಸ್ಥಿತಿ ಉಂಟಾಗಿರುತ್ತದೆ.

ಸರ್ಕಾರದ ಆದೇಶ ಸಂಖ್ಯೆ: ನೋಂದಣಿ ಮತ್ತು ಮುದ್ರಾಂಕ ಇಲಾಖೆ ಅಧಿಸೂಚನೆ ಸಂ : ಸಿವಿಸಿ/ಬಿ.ಯು.ಡಿ/5/2006-07 ಬೆಂಗಳೂರು, ದಿನಾಂಕ:17-4-2007 ರಲ್ಲಿ ನಿಗಧಿಪಡಿಸಿಲಾಗಿರುವ ಮಾರ್ಗಸೂಚಿ ದರಗಳ ಪಟ್ಟಿಯಲ್ಲಿ ಕದಿರೇನಹಳ್ಳಿ ಸರ್ವೆ ನಂ. ವ್ಯಾಪ್ತಿಯ ಬಿಡಿಎ/ಬಿಡಿಎ ಅನುಮೋದಿತ ಬಡಾವಣೆಗಳಿಗೆ ಚದರ ಅಡಿಗೆ ರೂ. 1200/- ದರ, ಕರೀಸಂದ್ರ ಸರ್ವೆ ನಂ. ವ್ಯಾಪ್ತಿಯ ಬಿಡಿಎ/ಬಿಡಿಎ

....................2

ಅನುಮೋದಿತ ಬಡಾವಣೆಗಳಿಗೆ ಚದರ ಅಡಿಗೆ ರೂ.1300/-, ಕದಿರೇನಹಳ್ಳಿ ಸ್ಲಂ ಪ್ರದೇಶಕ್ಕೆ ಚದರ ಅಡಿಗೆ ರೂ.1250/-, ಗೃಹ ನಿರ್ಮಾಣ ಸಹಕಾರ ಸಂಘಗಳ ಬಡಾವಣೆಗೆ ಚದರ ಅಡಿಗೆ ರೂ.1300/- ಈ ರೀತಿ ಬೇರೆ ಬೇರೆ ದರಗಳನ್ನು ನಿಗಧಿಪಡಿಸಿಲಾಗಿದೆ. ಕದಿರೇನಹಳ್ಳಿ ಕೆಳಸೇತುವೆಯ ಸರ್ವೀಸ್ ರಸ್ತೆ ನಿರ್ಮಾಣಕ್ಕೆ ವಶಪಡಿಸಿಕೊಳ್ಳಲಾಗುತ್ತಿರುವ ಸ್ವತ್ತುಗಳು ಕದಿರೇನಹಳ್ಳಿ, ಕರೀಸಂದ್ರ ಸರ್ವೆ ನಂಬರುಗಳಿಗೆ ಸೇರಿದ್ದು, ವಾಸ್ತವವಾಗಿ ಹಾಲಿ ಇರುವ 100 ಅಡಿ ರಸ್ತೆಯ ಎಡ ಮತ್ತು ಬಲ ಭಾಗದಲ್ಲಿ ತಾಗಿಕೊಂಡಿರುತ್ತವೆ. ಈ ರೀತಿ 100 ಅಡಿ ಅಂತರದಲ್ಲಿ ಇರುವಂತಹ ಸ್ವತ್ತುಗಳಿಗೆ ಕಂದಾಯ ಇಲಾಖೆಯ ಮಾರ್ಗಸೂಚಿ ದರಗಳ ಆಧಾರದಲ್ಲಿ ಕಂದಾಯ ಗ್ರಾಮಗಳ ಅನುಸಾರ ನಿಗಧಿಪಡಿಸಲಾದ ಮಾರ್ಗಸೂಚಿ ದರವನ್ನು ಪಾವತಿಸಿದಲ್ಲಿ ಒಬ್ಬರಿಗೆ, ಮತ್ತೊಬ್ಬರಿಗೆ ನಿಗಧಿಪಡಿಸಲಾದ ಪರಿಹಾರದ ಹಣದಲ್ಲಿ ವ್ಯತ್ಯಾಸಗಳು ಉಂಟಾಗುವ ಸಾಧ್ಯತೆ ಇದೆ. ಇದರಿಂದಾಗಿ ಸುಮಾರು ಮೂರು, ನಾಲ್ಕು ಲಕ್ಷಗಳ ವರೆಗೆ ಪರಿಹಾರದ ಹಣ ಪಾವತಿಯಲ್ಲಿ ವ್ಯತ್ಯಾಸ ಉಂಟಾಗುವ ಸಾಧ್ಯತೆಯಿದೆ. ಇದರಿಂದಾಗಿ ಒಂದೇ ಕಡೆ ಇರುವ ಸ್ವತ್ತಿನ ಮಾಲೀಕರು ಬೇರೆ ಬೇರೆ ದರಗಳಲ್ಲಿ ಪರಿಹಾರದ ಹಣವನ್ನು ಪಡೆಯಲು ಆಕ್ಷೇಪ ಮಾಡುತ್ತಿದ್ದು, ಕಾಮಗಾರಿಯ ಅನುಷ್ಠಾನಕ್ಕೆ ತೊಂದರೆ ಉಂಟಾಗುತ್ತಿದೆ. ಈ ಅಸಮಾನತೆಯನ್ನು ನಿವಾರಿಸಿ ಏಕ ರೂಪದ ಪರಿಹಾರದ ಹಣವನ್ನು ನಿಗಧಿಪಡಿಸುವ ಅವಶ್ಯಕತೆ ಕಾಮಗಾರಿಯ ಕಾಲಮಿತಿ ಅನುಷ್ಠಾನದ ದೃಷ್ಟಿಯಿಂದ ಅತಿ ಅವಶ್ಯಕವಾಗಿರುತ್ತದೆ.

ಈ ರೀತಿ ಒಂದೇ ರೀತಿಯ ಪರಿಹಾರವನ್ನು ಚ.ಅ.ಗೆ ರೂ. **1200/-** ಕ್ಕಿಂತ ಮೇಲ್ಪಟ್ಟು ರೂ.**1500/-**ಕ್ಕಿಂತ ಕೆಳಗೆ ನಿಗಧಿಪಡಿಸಿದಲ್ಲಿ ಅಸಮಾನತೆಯನ್ನು ನಿವಾರಿಸಿದಂತಾಗುತ್ತದೆ. ಜೊತೆಗೆ ಹೆಚ್ಚುವರಿಯಾಗಿ ಶೇ.30 ರಷ್ಟು ಸೋಲೇಷಿಯಂ ನೀಡಿದಲ್ಲಿ ಒಟ್ಟಾರೆ ಪರಿಹಾರ ರೂ.**1560/-** ರಿಂದ ರೂ.**1950/-** ಮಧ್ಯದಲ್ಲಿ ನಿಗಧಿಪಡಿಸಿದಂತಾಗುತ್ತದೆ. ಇದರಿಂದಾಗಿ ಅಂದರೆ, ಚ.ಅ.ಗೆ ರೂ.**1950/-** ನಿಗಧಿಪಡಿಸಿದಲ್ಲಿ ಭೂ ಪರಿಹಾರದ ಅಂದಾಜು ವೆಚ್ಚ ರೂ.**80,67,198.56** ಗಳಾಗುತ್ತದೆ. ಹೆಚ್ಚುವರಿಯಾಗಿ ಸ್ವತ್ತಿನ ಮಾಲೀಕರಿಂದ ಡಿ.ಆರ್.ಸಿಯನ್ನು ಖರೀದಿಸಲು ಮಾರ್ಗಸೂಚಿ ಬೆಲೆಯ ಶೇ.1 ರಷ್ಟು ನೋಂದಣಿ ಶುಲ್ಕ ಮತ್ತು ಶೇ.1 ರಷ್ಟು ಸ್ಟಾಂಪ್ ಶುಲ್ಕವನ್ನು ಸಹ ಭರಿಸಬೇಕಾಗುತ್ತದೆ. ಈ ರೀತಿ ಪರಿಹಾರ ನೀಡುವ ಮುನ್ನ ಪ್ರತಿಯೊಬ್ಬ ಸ್ವತ್ತಿನ ಮಾಲೀಕರಿಂದ ತಾನು ಯಾವುದೇ ನ್ಯಾಯಾಲಯದಲ್ಲಿ ದಾವೆ ಹೂಡುವುದಿಲ್ಲವೆಂದು ಹಾಗೂ ಪಾಲಿಕೆಯು ನಿಗಧಿಪಡಿಸಿರುವ ಪರಿಹಾರದ ಹಣವನ್ನು ಸ್ವ-ಇಚ್ಛೆಯಿಂದ ಪಡೆದುಕೊಂಡು ಡಿ.ಆರ್.ಸಿ.ಯನ್ನು ಪಾಲಿಕೆಗೆ ಮಾರಾಟ ಮಾಡಲು ಬದ್ಧರಿರುವುದಾಗಿ ನಿಗಧಿತ ದರದ ಛಾಪಾಕಾಗದದಲ್ಲಿ ಮುಚ್ಚಳಿಕೆಯನ್ನು ಸಹ ಪಡೆಯಬಹುದಾಗಿರುತ್ತದೆ.

**ಆದ್ದರಿಂದ ಈ ಕೆಳಕಂಡ ಪ್ರಸ್ತಾವನೆಯನ್ನು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿದೆ:**

1. ಕದಿರೇನಹಳ್ಳಿ ಕೆಳಸೇತುವೆ ನಿರ್ಮಾಣಕ್ಕಾಗಿ ಹಾಗೂ ಸರ್ವೀಸ್ ರಸ್ತೆ ನಿರ್ಮಾಣಕ್ಕಾಗಿ ವಿಷಯ ಸಂಖ್ಯೆ: 387/2009-10 ರಲ್ಲಿ ದಿನಾಂಕ:09-12-2009 ರಂದು ತೆಗೆದುಕೊಂಡಿರುವ ಮಾನ್ಯ ಆಡಳಿತಗಾರರ ನಿರ್ಣಯವನ್ನು ಕೆಳಕಂಡಂತೆ ಮಾರ್ಪಡಿಸಲು.
2. ಕದಿರೇನಹಳ್ಳಿ ಕೆಳಸೇತುವೆಗೆ ಹೊಂದಿಕೊಂಡಂತೆ ಸರ್ವೀಸ್ ರಸ್ತೆ ನಿರ್ಮಾಣಕ್ಕಾಗಿ ವಶಪಡಿಸಿಕೊಳ್ಳಬೇಕಾದ ಸುಮಾರು 60 ಸ್ವತ್ತುಗಳಿಗೆ ಹಾಲಿ ನಿಗಧಿಪಡಿಸಿರುವ ಚ.ಅಡಿಗಳಿಗೆ ರೂ.1200/- ಮತ್ತು ರೂ.1300/-ಗಳ ಬದಲಾಗಿ ರೂ.1200/- ರಿಂದ ರೂ.1500/- ಗಳ ಮಧ್ಯದ ಒಂದು ದರವನ್ನು ನಿಗಧಿಪಡಿಸಲು ಹಾಗೂ ಇದನ್ನು ಕಾಮಗಾರಿಯ ಅಂದಾಜು ವೆಚ್ಚದಿಂದ ಭರಿಸಲು ಹಾಗೂ ಸಾಕಾಗದಿದ್ದಲ್ಲಿ, 2010-11ನೇ ಸಾಲಿನ ಪಾಲಿಕೆಯ ಆಯವ್ಯಯದಲ್ಲಿ ಭೂಸ್ವಾಧೀನ ಲೆಕ್ಕ ಶೀರ್ಷಿಕೆಯಿಂದ ಭರಿಸಲು ಅನುಮೋದನೆ.

3. ಈ ಸ್ವತ್ತುಗಳನ್ನು ಡಿ.ಆರ್.ಸಿ ಪಡೆದ ನಂತರ ಸ್ವತ್ತಿನ ಮಾಲೀಕರಿಂದ ಪಾಲಿಕೆಯ ಹೆಸರಿಗೆ ಖರೀದಿಸಲು ಮಾರ್ಗಸೂಚಿ ಬೆಲೆಯ ಶೇ.1 ರಷ್ಟು ನೋಂದಣಿ ಶುಲ್ಕ ಮತ್ತು ಶೇ.1 ರಷ್ಟು ಸ್ಟಾಂಪ್ ಶುಲ್ಕವನ್ನು ಸಹ ಕಾಮಗಾರಿ ವೆಚ್ಚದಿಂದ ಹಾಗೂ 2010-11ನೇ ಸಾಲಿನ ಪಾಲಿಕೆಯ ಆಯವ್ಯಯದಲ್ಲಿ ಭೂಸ್ವಾಧೀನ ಲೆಕ್ಕ ಶೀರ್ಷಿಕೆಯಿಂದ ಭರಿಸಲು,

4. ಈ ರೀತಿ ಪರಿಹಾರ ಪಾವತಿಸುವ ಮುನ್ನ ಪ್ರತಿಯೊಬ್ಬ ಸ್ವತ್ತಿನ ಮಾಲೀಕರಿಂದ "ತಾನು ಯಾವುದೇ ನ್ಯಾಯಾಲಯದಲ್ಲಿ ದಾವೆ ಹೂಡುವುದಿಲ್ಲವೆಂದು ಹಾಗೂ ಯಾವುದೇ ಪ್ರಾಧಿಕಾರ ಹಾಗೂ ಸರ್ಕಾರಕ್ಕೆ ಹೆಚ್ಚಿನ ಪರಿಹಾರಕ್ಕಾಗಿ ಮನವಿ ಸಲ್ಲಿಸುವುದಿಲ್ಲವೆಂದು, ಪಾಲಿಕೆಯು ನಿಗಧಿಪಡಿಸಿರುವ ಪರಿಹಾರದ ಹಣವನ್ನು ಸ್ವ-ಇಚ್ಛೆಯಿಂದ ಪಡೆದುಕೊಂಡು ಡಿ.ಆರ್.ಸಿ.ಯನ್ನು ಪಾಲಿಕೆಗೆ ಮಾರಾಟ ಮಾಡಲು ಬದ್ಧರಿರುವುದಾಗಿ ಹಾಗೂ ಈ ನಿವೇಶನ/ ಜಮೀನಿನ ಬಗ್ಗೆ ತಾನು ಬಿಡಿಎ/ ಯಾವುದೇ ಪ್ರಾಧಿಕಾರದಿಂದ ಭೂ-ಪರಿಹಾರವನ್ನು ಪಡೆದಿಲ್ಲವೆಂದು" ನಿಗಧಿತ ದರದ ಛಾಪಾಕಾಗದದಲ್ಲಿ ಮುಚ್ಚಳಿಕೆಯನ್ನು ಸಹ ಪಡೆಯಲು, ಅನುಮೋದನೆ.

ಮೇಲ್ಕಂಡ ನಾಲ್ಕು ಅಂಶಗಳಿಗೆ ಅನುಮೋದನೆ ಕೋರಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯು ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:29-08-2010 ರ ಟಿಪ್ಪಣಿ ಹಾಗೂ ನೊಂದಣಾಧಿಕಾರಿಗಳ ಮಾರ್ಗಸೂಚಿ ದರ ಗರಿಷ್ಠ ರೂ.1300-00 ಎಂಬುದಾಗಿ ಇದ್ದು, ಸಾಮಾನ್ಯವಾಗಿ ಮಾರುಕಟ್ಟೆ ದರಕ್ಕಿಂತ ನೊಂದಣಿ ದರ ಕಡಿಮೆ ಇರುವುದು ಕಂಡುಬರುತ್ತದೆ. ಆದ ಕಾರಣ ಭೂಸ್ವಾಧೀನ ಕಾಯ್ದೆಯಂತೆ ಮಾರುಕಟ್ಟೆ ದರ ಶೇಕಡ 30% ಸೋಲೇಷಿಯಂ ಹಾಗೂ ಶೇಕಡ 12% ಹೆಚ್ಚುವರಿ ಮಾರುಕಟ್ಟೆ ದರ ಸೇರಿ ಚದರಡಿ ಒಂದಕ್ಕೆ ರೂ.2500-00 ಗಳಂತೆ ಕರಿಸಂದ್ರ, ಕದಿರೇನಹಳ್ಳಿಗಳಲ್ಲಿ ಭೂಸ್ವಾಧೀನಕ್ಕೆ ಒಳಪಡುವ ಎಲ್ಲಾಸ್ವತ್ತುಗಳಿಗೂ ಒಂದೇ ರೀತಿಯಲ್ಲಿ ಪರಿಹರ ನಿಗಧಿಪಡಿಸಲು ಆಯುಕ್ತರ ದಿನಾಂಕ:29-08-2010 ರ ಟಿಪ್ಪಣಿಯನ್ನು ಮಾರ್ಪಡಿಸಿ ಒಪ್ಪಿದೆ.

ಶ್ರೀ.ಬಿ.ಎಸ್.ಸತ್ಯನಾರಾಯಣ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ದಿನಾಂಕ:15-11-2010 ರ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ನಿರ್ಣಯವನ್ನು ಭಾಗಶ: ಒಪ್ಪುತ್ತಾ, ಸ್ವತ್ತಿನ ಮಾಲೀಕರ ಮನವಿಯನ್ನು ಪುರಸ್ಕರಿಸಿ ರೂ.3,000/- ಗಳಂತೆ ದರವನ್ನು ನಿಗಧಿಪಡಿಸಿದೆ".

ಶ್ರೀ.ಗಂಗಭೈರಯ್ಯ ರವರು, ಶ್ರೀ.ಬಿ.ಎಸ್.ಸತ್ಯನಾರಾಯಣ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** "ದಿನಾಂಕ:15-11-2010 ರ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ನಿರ್ಣಯವನ್ನು ಭಾಗಶ: ಒಪ್ಪುತ್ತಾ, ಸ್ವತ್ತಿನ ಮಾಲೀಕರ ಮನವಿಯನ್ನು ಪುರಸ್ಕರಿಸಿ ರೂ.3,000/- ಗಳಂತೆ ದರವನ್ನು ನಿಗಧಿಪಡಿಸಿದೆ".

(ಎನ್.ದಯಾನಂದ್)
ಉಪ ಮಹಾಪೌರರು